1053

AN ACT TO CONSOLIDATE AND AMEND THE LAW RELATING TO CRIMINAL PROCEDURE.

ಕ್ರಿಮಿನಲ್ ಪ್ರೊಸಿಡ್ಯೂರ್‌ಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಪಡಿಸಿ ದುರಸ್ತು ಮಾಡಲಿಕ್ಕೆ ಉಂಟಾದ ಆಕ್ಟು.

ಕ್ರಿಮಿನಲ್ ಪ್ರೊಸಿಡ್ಯೂರಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಪಡಿಸಿ ದುರಸ್ತು ಮಾಡುವದು ಯುಕ್ತವಾಗಿರುವದರಿಂದ ಇದರಿಂದ ನಿರ್ಣಯಿಸುವದೇನೆಂದರೆ:—

ಪೀಠಿಕೆ.

PART I.

1ನೇ ಭಾಗ.

PRELIMINARY.

ಅವತರಣಿಕೆ.

CHAPTER I.

1ನೇ ಅಧ್ಯಾಯ.

ಚಿಕ್ಕ ಹೆಸರು. ಪುರು.

1. ಈ ಆಕ್ಟು—"1882ನೇ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು" ಯೆಂಬದಾಗಿ ಕರೆಯಲ್ಪಡಬಹುದು: ಮತ್ತು ಇದು 1886ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಜಾರೀಲಿ ಬರತಕ್ಕದ್ದು;

ಇದು ಮೈಸೂರು ದೇಶದೊಳಗೆಲ್ಲಾ ವ್ಯಾಪಿಸುತ್ತದೆ; ಆದರೆ, ವಿರೋಧವಾಗಿ ಅಜ್ಞಾಪಿಸುವ ಯಾವ ವಿಶೇಷ ನಿಬಂಧನೆಯೂ ಇಲ್ಲದಪಕ್ಷದಲ್ಲಿ, ಇದರಲ್ಲಿ ಅಡಗಿರುವಂಥಾದ್ದು ಯಾವದೂ ಈಗ ಜಾರೀಲಿರುವಂಥಾ ಸ್ಥಳಿಕ ಯಾ ವಿಶೇಷ ಕಾನೂನನ್ನಾಗಲೀ, ಅಥವಾ ಕೊಡೊಣಾದ ಯಾವದಾದರೂ ಅಧಿಕಾರ—ಯಾ—ವಿಶೇಷ ಅಧಿಕಾರ ಸರಹದ್ದನ್ನಾಗಲೀ, ಈಗ ಜಾರೀಲಿರುವಂಥಾ ಇತರ ಯಾವ ಕಾನೂನಿನಿಂದಾದರೂ ಏರ್ಪಡಿಸೋಣಾದ ವಿಶೇಷವಾದ ನಡವಳಿಕೆ ನಮೂನೆಗಳನ್ನಾಗಲೀ, ಬಾಧಿಸುವದಿಲ್ಲಾ, ಅಥವಾ ಇದರಲ್ಲಿ ಅಡಗಿರುವಂಥಾದ್ದು ಯಾವದೂ—

ಸ್ಥಳಿಕವ್ಯಾಪ್ತಿ.

ಮೈಸೂರು ಶೀಮೆಯಲ್ಲಿ ಗ್ರಾಮ ಪೋಲೀಸು ಅಫಿಸರುಗಳಿಗೆ ಲಾಗಾವಾಗುವದಿಲ್ಲ.

ಚಟ್ಟುಗಳ ರದ್ದಿಯಾತಿ.

2. 1886ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ—ವ—ಆ ತಾರೀಖಿನಿಂದ, ಮೊದಲನೇ ಷೆಡ್ಯೂಲಿನಲ್ಲಿ ನಮೂದಿಸಿದ ಚಟ್ಟುಗಳು, ಸದರೀ ಷೆಡ್ಯೂಲಿನ ಮೂರನೇ ಮದ್ದಿನಲ್ಲಿ ನಮೂದಿಸಿರುವಷ್ಟರಮಟ್ಟಿಗೆ ರದ್ದಾಗತಕ್ಕದ್ದು, ಆದರೆ ಅದರಿಂದ ಮುಂಚೆಯಿಲ್ಲದ—ಯಾ—ತದನಂತರ ಬಂದ ಯಾವ ಅಧಿಕಾರ ಸರಹದ್ದಾಗಲೀ ನಡವಳಿಕೆಯ ನಮೂನೆಯಾಗಲೀ ಪುನಹ ಉಂಟಾಗುವದಿಲ್ಲ—ಯಾ—ಮುಂಚೆ ಕಾನೂನುಪ್ರಕಾರ ವಾಗಿರುತ್ತಿದ್ದು ಈಗ ಜಾರಿಯಲ್ಲಿ ಇರುತ್ತಿರುವ ಶೆರೆಯನ್ನು ಕಾನೂನಿನಪ್ರಕಾರ ವಾದ್ದಲ್ಲದ್ದಾಗಿ ಮಾಡುವದಿಲ್ಲ.

ರದ್ದಾದ ಆಕ್ಟುಗಳನ್ನು ನುಸರಿಸಿದ ಪ್ರಕಟನೆ ಇತ್ಯಾದಿಗಳು.

ಇದರಿಂದ ರದ್ದಾಗಿರುವ ಯಾವ ಚಟ್ಟುಪ್ರಕಾರವಾದರೂ, ಅಂಥಾ ಚಟ್ಟುದಿಂದ ರದ್ದಾದ ಯಾವ ಚಟ್ಟು ಪ್ರಕಾರವಾದರೂ, ಪ್ರಕಟಿಸಲ್ಪಟ್ಟ ಯಲ್ಲಾ ಪ್ರಕಟನೆಗಳು, ಕೊಡಲ್ಪಟ್ಟ ಇನ್ಸ್ತಿಹಾರುಗಳು, ಅಧಿಕಾರಗಳು, ನಿರ್ದೇಶಿಸಲ್ಪಟ್ಟ ನನೂನೆಗಳು, ವಿವರಿಸಲ್ಪಟ್ಟ ಸ್ಥಳಿಕ ಸರಹದ್ದುಗಳು, ಕೊಡಲ್ಪಟ್ಟ ತೀರ್ಪುಗಳು—ವ—ಹುಕ್ಕು

ಮುಗಳು, ಮಾಡಲ್ಪಟ್ಟ ಮೊಕರರಾತಿಗಳು,—ವ—ರೂಲ್ಸುಗಳು, 1886ನೇ ಇಸವಿಯ ಜುಲೈ ಗುರ್ತೀ ತಾರೀಖಿಗ. ಮುಂಚೆ ಅತಿ ತತ್ಪೂರ್ವದಲ್ಲಿ ಜಾರೀಲಿರುತ್ತಿದ್ದರೆ ಅವು ಈ ಕೋಡಿನಲ್ಲಿ ಅವುಗಳಿಗೆ ಸರಿಬೀಳುವ ಅಯಾಯ ಪ್ರಕರಣದಮೇರಿಗೆ ಪ್ರಕಟಿಸೋಣಾಯಿತು, ಕೊಡೋಣಾಯಿತು, ನಿರ್ದಿಶಿಸೋಣಾಯಿತು, ವಿವರಿಸೋಣಾಯಿತು, ಕೊಡೋಣಾಯಿತು—ವ—ಮಾಡೋಣಾಯಿತು ಯೆಂಬಿದಾಗಿ ಎಣಿಸತಕ್ಕದ್ದು.

ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿಗೆ ಮತ್ತು ರದ್ದಾದ ಯಿತರಚಟ್ಟಗಳಿಗೆ ದಾಖಲೆಗಳು.

3. ಈ ಕೋಡ ಜಾರೀಲಿ ಬರುವದಕ್ಕಿಂತಮುಂಚೆ ನಿರ್ಣಯಿಸಲ್ಪಟ್ಟಂಥಾ ಪ್ರತಿ ಚಟ್ಟದಲ್ಲಿ—ಯಾ—1861ನೇ ಇಸವಿಯ 25ನೇ ನಂಬರ್ ಆಕ್ಟಾದ—ಯಾ—1872ನೇ ಇಸವಿಯ 10ನೇ ನಂಬರ್ ಆಕ್ಟಾದ, ಕ್ರಿಮಿನಲ್ ಪ್ರೊಸೀಡ್ಯೂರ್‌ಕೋಡಿನ ಅಥವಾ ಇದರಿಂದ ರದ್ದಾಗಿರುವ ಇತರ ಕಾನೂನಿನ ಯಾವ ಅಧ್ಯಾಯಕ್ಕಾಗಲೀ ಪ್ರಕರಣಕ್ಕಾಗಲೀ ದಾಖಲೆ ತೋರಿಸಿದ್ದರೆ ಅಂಥಾ ದಾಖಲೆಯನ್ನು ಸಾಧ್ಯವಾಗುವಷ್ಟರಮಟ್ಟಿಗೆ, ಈ ಕೋಡಿಗೆ ಅಥವಾ ಇದಕ್ಕೆ ಸರಿಬೀಳುವ ಅಧ್ಯಾಯ—ಯಾ—ಪ್ರಕರಣಕ್ಕೆ, ಮಾಡಿದ ಹಾಗೆ ಯೆಣಿಸತಕ್ಕದ್ದು.

ಮುಂಚಿನ ಆಕ್ಟುಗಳಲ್ಲಿರುವ ಮಾತುಗಳು.

ಈ ಕೋಡ ಜಾರೀಲಿಬರುವದಕ್ಕಿಂತ ಮುಂಚೆ ನಿರ್ಣಯಿಸಲ್ಪಟ್ಟಂಥಾ ಪ್ರತಿ ಚಟ್ಟದಲ್ಲಿ ಒರೆದಿರುವ "ಒಬ್ಬ ಮೇಜಸ್ಟ್ರೇಟಿನ ಅಧಿಕಾರಗಳನ್ನು (—ಯಾ—'ಪೂರಾ ಅಧಿಕಾರಗಳನ್ನು,) ಚಲಾಯಿಸುವಂಥಾ (—ಯಾ—'ಇರುವ') ಆಫಿಸರು," "ಫರ್ಸ್ಟ್‌ಕ್ಲಾಸ್ ಸಬಾರ್ಡಿನೇಟ್ ಮಾಜಿಸ್ಟ್ರೇಟು," "ಸೆಕಂಡುಕ್ಲಾಸ್ ಸಬಾರ್ಡಿನೇಟ್ ಮೇಜಿಸ್ಟ್ರೇಟು," ಯೆಂಬ ಮಾತುಗಳ ಪೈಕಿ ಒಂದೊಂದಕ್ಕೆ ಒಂದೊಂದು ಕ್ರಮವಾಗಿ "ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟು," "ಸೆಕಂಡ್ ಕ್ಲಾಸ್ ಮ್ಯಾಜಿಸ್ಟ್ರೇಟು,"—ವ—"ತರ್ಡ್‌ಕ್ಲಾಸ್ ಮ್ಯಾಜಿಸ್ಟ್ರೇಟು," ಯೆಂಬಿದಾಗಿ ಅರ್ಥಕೊಡುತ್ತದೆಂದು ಗ್ರಹಿಸತಕ್ಕದ್ದು; "ಒಂದು ಡಿಸ್ಟ್ರಿಕ್ಟಿನ ಡಿವಿಜ್ಞ ಮ್ಯಾಜಿಸ್ಟ್ರೇಟು" ಅಂದರೆ "ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್," ಯೆಂಬಿದಾಗಿ "ಡಿಸ್ಟ್ರಿಕ್ಟಿನ ಮ್ಯಾಜಿಸ್ಟ್ರೇಟು" ಅಂದರೆ "ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್," ಯೆಂಬಿದಾಗಿ ಅರ್ಥಕೊಡುತ್ತದೆಂದು ಗ್ರಹಿಸತಕ್ಕದ್ದು.

ಅರ್ಥವಿವರಣೆಯ ಕಲಂ.

4. ಪ್ರಮೇಯದಿಂದ—ಯಾ—ಸಂದರ್ಭದಿಂದ ಬೇರೇ ತಾತ್ಪರ್ಯ ತೋರಿದರೇನೇ ಶಿವಾಯಿ ಈ ಕೋಡಿನಲ್ಲಿ ಈ ಕೆಳಗಣ ಪದಗಳು—ವ—ಮಾತುಗಳು ಕೆಳಗಣ ಅರ್ಥಗಳುಳ್ಳವುಗಳಾಗಿವೆ:—

"ಫಿರ್ಯಾದು."

(a) "ಫಿರ್ಯಾದು" ಯೆಂಬಮಾತು, ಗೊತ್ತಾದ—ಯಾ—ಗೊತ್ತಿಲ್ಲದ ಒಬ್ಬನೊಬ್ಬ ಮನುಷ್ಯನು ಒಂದು ತಕ್ಕೀರನ್ನು ಮಾಡಿದನೆಂಬಿದಾಗಿ, ಒಬ್ಬ ಮ್ಯಾಜಿಸ್ಟ್ರೇಟು ಈ ಕೋಡನ್ನನುಸರಿಸಿ ಅಮಲ್‌ನಡಿಸತಕ್ಕ ಬಗ್ಗೆ ಅತನಿಗೆ ಜಬಾನಿಯಾಗಿ—ಯಾ—ಬರಹವಾಮೂಲವಾಗಿ ತಿಳಿಸೋಣಾದ, ಹೇಳಿಕೆ ಯೆಂದು ಅರ್ಥಕೊಡುತ್ತದೆ; ಆದರಂತು ಇದರಲ್ಲಿ ಪೋಲೀಸು ಆಫಿಸರನ ರಿಪೋರ್ಟು ಸೇರುವದಿಲ್ಲ:

"ಪೋಲೀಸು ವಿಚಾರಣೆ."

(b) "ಪೋಲೀಸು ವಿಚಾರಣೆ" ಯೆಂಬ ಮಾತುಗಳು ಸಾಕ್ಷ್ಯವನ್ನು ಜಮಾಯಿಸುವದಕ್ಕಾಗಿ ಪೋಲೀಸುನವರಾಗಲೀ ಅಥವಾ ಈ ಬಗ್ಗಾಗಿ ಒಬ್ಬ ಮ್ಯಾಜಿಸ್ಟ್ರೇಟಿನಿಂದ ಅಧಿಕಾರ ಹೊಂದಿರುವ (ಒಬ್ಬ ಮ್ಯಾಜಿಸ್ಟ್ರೇಟಲ್ಲದ—ಯಾ—ಪೋಲೀಸು ಆಫೀಸರಲ್ಲದ ಇತರ) ಯಾವ ಮನುಷ್ಯನಾಗಲೀ ಈ ಕೋಡಿಗನುಗುಣವಾಗಿ ನಡಗಿಸುವ ಯೆಲ್ಲಾ ವ್ಯವಹರಣೆಗಳನ್ನು ಅಡಗಿಸಿಕೊಂಡಿವೆ:

"ವಿಚಾರಣೆ."

(c) "ವಿಚಾರಣೆ" ಯೆಂಬಮಾತು ಒಬ್ಬ ಮ್ಯಾಜಿಸ್ಟ್ರೇಟುನಿಂದಲಾದರೂ ಕೋರ್ಟಿನವರಿಂದಲಾದರೂ ಈ ಕೋಡಿಗನುಗುಣವಾಗಿ ಜರಗಿಸಲ್ಪಡಬಹುದಾದ ಪ್ರತಿ ವಿಚಾರಣೆಯನ್ನು ಅಡಗಿಸಿಕೊಂಡಿರುತ್ತದೆ:

(d) "ಜುಡಿಷಲ ಪ್ರೊಸೀಡಿಂಗ್" ಯಾನೆ ಜುಡಿಷಲ ವ್ಯವಹರಣೆಯೆಂಬ ಮಾತುಗಳು, ಯಾವ ವ್ಯವಹರಣೆಯು ಜರುಗುತ್ತಿರುವಾಗ ಸಾಕ್ಷ್ಯವು, ಕಾನೂನುಪ್ರಕಾರ ತೆಗೆಯಲ್ಪಟ್ಟು –ಯಾ– ತೆಗೆಯಲ್ಪಡಬಹುದಾಗಿ ಇರುತ್ತದೋ ಅಂಥಾ ವ್ಯವಹರಣೆಯೆಂತ ಅರ್ಥವಾಗುತ್ತದೆ :

"ಜುಡಿಷಲ್ ಪ್ರೊಸೀಡಿಂಗ್."

(e) "ಬರಹ"–ವ–"ಲಿಖಿತವಾದ" ಯೆಂಬ ಮಾತುಗಳು ಕಾಗದದಮೇಲಾಗಲೀ ಯಾವ ಪದಾರ್ಥದಮೇಲಾಗಲೀ ಅಕ್ಷರಗಳನ್ನ –ಯಾ– ರೂಪಗಳನ್ನ ತೋರಿಸಲಿಕ್ಕಾಗುವಂಥಾ "ಛಾಪ್ಯಾ," "ಶಿಲಾಯಂತ್ರ," "ಛಾಯಗ್ರಾಹಿ," "ಕೆತ್ತುವಿಕೆ" ಮತ್ತು ಯಿತರ ಪ್ರತಿವಿಧವನ್ನೂ ಅಡಗಿಸಿಕೊಂಡಿರುತ್ತವೆ :

"ಬರಹ" ಮತ್ತು "ಲಿಖಿತವಾದ."

(f) "ಸಬ್ ಡಿವಿಜನ್" ಅಂದರೆ ಈ ಕೋಡಿಗನುಗುಣವಾಗಿ ಮಾಡೋಣಾದ ಒಂದು ಡಿಸ್ಟ್ರಿಕ್ಟಿನ ಸಬ್ ಡಿವಿಜನು;

"ಸಬ್ ಡಿವಿಜನ್."

(g) "ಪ್ರಾವಿನ್ಸು" ಅಂದರೆ ಆಯಾ ಕಾಲದಲ್ಲಿ ಮೈಸೂರು ಗವರ್ನಮೆಂಟಿನವರ ಆಡಳಿತದಲ್ಲಿರುವಂಥಾ ರಾಜ್ಯ;

"ಪ್ರಾವಿನ್ಸು."

(h) "ಪಬ್ಲಿಕ ಪ್ರೊಸಿಕ್ಯೂಟರ" ಅಂದರೆ 492ನೇ ಪ್ರಕರಣಪ್ರಕಾರ ನೇಮಿಸಲ್ಪಟ್ಟ ಯಾವನೊಬ್ಬ ಮನುಷ್ಯನೆಂತಾ ಅರ್ಥವಾಗುತ್ತದೆ, ಮತ್ತು ಒಬ್ಬ ಪಬ್ಲಿಕ ಪ್ರೊಸಿಕ್ಯೂಟರಿನ ಅಪ್ಪಣೆನಿಶಿ ನಡೆಯುವ ಮನುಷ್ಯನನ್ನು ಅಡಗಿಸಿಕೊಂಡಿರುತ್ತದೆ:

"ಪಬ್ಲಿಕ ಪ್ರೊಸಿಕ್ಯೂಟರ."

(i) "ಪ್ಲೀಡರ" ಯೆಂಬಮಾತು ಯಾವ ಮೊದುಕೋರ್ಟಿನ ವ್ಯವಹರಣೆಯಲ್ಲಿ ಉಪಯೋಗಿಸುವಾಗ, ಸದರೀ ಕೋರ್ಟಿನಲ್ಲಿ ವ್ಯವಹರಿಸಲಿಕ್ಕೆ ಆಯಾ ಕಾಲದಲ್ಲಿ ಜಾರೀಲಿರುವ ಯಾವ ಕಾನೂನಿಗನುಗುಣವಾಗಾಗಲೀ ಅಧಿಕಾರಹೊಂದಿದ ಪ್ಲೀಡರೆ ಎಂತ ಅರ್ಥವಾಗುತ್ತದೆ; ಮತ್ತು (1) ಹಾಗೆ ಅಧಿಕಾರಹೊಂದಿರುವ ಚೀಫ ಕೋರ್ಟಿನ ಅಡ್ವೋಕೇಟನ್ನು ಮತ್ತು (2) ಅಂಥಾ ವ್ಯವಹರಣೆಯಲ್ಲಿ ಕಾರ್ಯ ಜರಗಿಸಲಿಕ್ಕೆ ಕೋರ್ಟಿನವರ ಅಪ್ಪಣೆಪ್ರಕಾರ, ನೇಮಿಸಲ್ಪಟ್ಟ ವೊಕ್ಕಾಲ್ಯರನನ್ನು –ಯಾ– ಇತರ ಮನುಷ್ಯನನ್ನು ಅಡಗಿಸಿಕೊಂಡಿರುತ್ತದೆ:

"ಪ್ಲೀಡರು."

(o) "ಪೋಲಿಸಸ್ಟೇಷ್ಟ" ಅಂದರೆ ಈ ಕೋಡಿನ ಉದ್ದೇಶ್ಯಗಳಿಗೋಸ್ಕರ ಒಂದು ಪೋಲಿಸು ಸ್ಟೇಷ್ಟಯೆಂತ ಮೈಸೂರು ಗವರ್ನಮೆಂಟಿನವರಿಂದ ಸಾಧಾರಣವಾಗಿ– ಯಾ– ವಿಶೇಷವಾಗಿ ಹೇಳಲ್ಪಟ್ಟ ಸ್ಥಾನಯೆಂತ ಅರ್ಥವಾಗುತ್ತದೆ. ಮತ್ತು ಈ ಬ್ಯಾಗಿ ಮೈಸೂರು ಗವರ್ನಮೆಂಟಿನವರಿಂದ ನೆಮೂದಿಸಲ್ಪಟ್ಟ ಒಂದು ಸ್ಥಳಿಕ ಸರಹದ್ದನ್ನು ಅಡಗಿಸಿಕೊಂಡಿರುತ್ತದೆ; ಮತ್ತು "ಪೋಲಿಸ ಸ್ಟೇಷ್ಟ ಜಿಮ್ಮೆಯನ್ನುಳ್ಳ ಆಫಿಸರು" ಯೆಂಬ ಮಾತು, ಪೋಲಿಸ ಸ್ಟೇಷ್ಟ ಜಿಮ್ಮೆಯನ್ನುಳ್ಳ ಆಫಿಸರು ಅದರಲ್ಲಿ ಹಾಜರಿಲ್ಲದಿಯಾಗಲೀ– ಯಾ– ಕಾಹಿಲೆಯಿಂದ ಕೆಲಸ ನಡಿಸಲಿಕ್ಕೆ ಅಶಕ್ತನಾಗಿಯಾಗಲೀ ಇರುವಾಗ್ಯೆ, ಸದರೀ ಆಫಿಸರಿಗೆ ಎರಡನೇದರ್ಜೆಗೂ ಕಾರ್ಯಸ್ಟೇಬಿಲ್ ದರ್ಜೆಗಿಂತ ಹೆಚ್ಚು ದರ್ಜೆಗೂ ಶೇರಿದವನಾಗಿ ಪೋಲಿಸ ಸ್ಟೇಷನಿನಲ್ಲಿ ಹಾಜರಿರುವ ಪೋಲಿಸಾಫಿಸರನ್ನು, ಅಥವಾ ಮೈಸೂರು ಗವರ್ನಮೆಂಟಿನವರು ನಿರ್ದೇಶಿಸುವಮೇರಿಗೆ ಹಾಗೆ ಹಾಜರಿರುವ ಯಾವ ಇತರ ಪೋಲಿಸಾಫಿಸರನ್ನು ಅಡಗಿಸಿಕೊಂಡಿರುತ್ತದೆ:

"ಒಂದು ಪೋಲೀಸು ಸ್ಟೇಷ್ಟ ಜಿಮ್ಮೆಯನ್ನುಳ್ಳ ಆಫಿಸರು."

(p) "ಅಫೆನ್ಸು ಯಾನೆ ತಕ್ಕೀರು" ಅಂದರೆ ಆಯಾ ಕಾಲದಲ್ಲಿ ಜಾರೀಲಿರುವ ಯಾವ ಕಾನೂನಿನ ಪ್ರಕಾರವಾಗಲೀ ಶಿಕ್ಷಿಸತಕ್ಕ ಕೃತ್ಯವು– ಯಾ– ಲೋಪವು ಎಂಬದಾಗಿ ಅರ್ಥವಾಗುತ್ತದೆ:

"ಅಫೆನ್ಸು."

(q) "ವಾರಂಟು ಇಲ್ಲದೆ ಹಿಡಿಯಬಹುದಾದ ತಕ್ಕೀರು" ಮತ್ತು "ವಾರಂಟು ಇಲ್ಲದೆ ಹಿಡಿಯಬಹುದಾದ ಮೊಕದ್ದಮೆ" ಅಂದರೆ ಒಬ್ಬ ಪೋಲೀಸು ಆಫೀಸರು ಯಿರಡನೇ ಷಡ್ಯೂಲು ಪ್ರಕಾರವಾಗಲೀ ಆಯಾ ಕಾಲದಲ್ಲಿ ಜಾರೀಲಿ ಇರುವ ಯಾವ ಕಾನೂನಿನ ಪ್ರಕಾರವಾಗಲೀ ವಾರಂಟಿಲ್ಲದೆ ಹಿಡಿಯಬಹುದಾದ ತಕ್ಕೀರು—ಯಾ—ಮೊಕದ್ದಮೆಯೆಂತ ಅರ್ಥವಾಗುತ್ತದೆ:

"ವಾರಂಟು ಇಲ್ಲದೆ ಹಿಡಿಯಬಹುದಾದ ತಕ್ಕೀರು."
"ವಾರಂಟು ಇಲ್ಲದೆ ಹಿಡಿಯಬಹುದಾದ ಮೊಕದ್ದಮೆ."

"ವಾರಂಟು ಇಲ್ಲದೆ ಹಿಡಿಯಕೂಡದ ತಕ್ಕೀರು" ಮತ್ತು "ವಾರಂಟಿಲ್ಲದೆ ಹಿಡಿಯಕೂಡದ ಮೊಕದ್ದಮೆ" ಅಂದರೆ ಒಬ್ಬ ಪೋಲೀಸು ಆಫೀಸರು ವಾರಂಟು ಇಲ್ಲದೆ ಹಿಡಿಯಕೂಡದ ತಕ್ಕೀರು ಯಾ ಮೊಕದ್ದಮೆ ಎಂತ ಅರ್ಥವಾಗುತ್ತದೆ:

"ವಾರಂಟು ಇಲ್ಲದೆ ಹಿಡಿಯಕೂಡದ ತಕ್ಕೀರು."
"ವಾರಂಟು ಇಲ್ಲದೆ ಹಿಡಿಯಕೂಡದ ಮೊಕದ್ದಮೆ."

(r) "ಜಾಮೀನ್ಮೇಲೆ ಬಿಡಬಹುದಾದ ತಕ್ಕೀರು" ಅಂದರೆ ಎರಡನೇ ಷಡ್ಯೂಲಿನಲ್ಲಿ ಜಾಮೀನಿಗೆ ಯೋಗ್ಯವೆಂತ ತೋರಿಸಿರುವ—ಯಾ—ತತ್ಸ್ಥಳದಲ್ಲಿ ಜಾರಿಯಲ್ಲಿಯಿರುವ ಯಾವ ಕಾನೂನಿಂದಾಗಲೀ ಜಾಮೀನಿಗೆ ಯೋಗ್ಯವಾಗಿ ಮಾಡಲ್ಪಟ್ಟಿರುವ ತಕ್ಕೀರೆಂತ ಅರ್ಥವಾಗುತ್ತದೆ: ಮತ್ತು "ಜಾಮೀನುಮೇಲೆ ಬಿಡಕೂಡದ ತಕ್ಕೀರು" ಅಂದರೆ ಯಾವದಾದರೂ ಇತರ ತಕ್ಕೀರೆಂತಾ ಅರ್ಥವಾಗುತ್ತದೆ:

"ಜಾಮೀನ್ಮೇಲೆ ಬಿಡಬಹುದಾದ ತಕ್ಕೀರು."
"ಜಾಮೀನ್ಮೇಲೆ ಬಿಡಕೂಡದ ತಕ್ಕೀರು."

(s) "ವಾರಂಟು ಕೇಸು" ಅಂದರೆ, ಮರಣದಂಡನೆಯಿಂದ, ಟ್ರಾನ್ಸ್‌ಪೋರ್ಟೇಷನಿಂದ, ಶಿಕ್ಷಿಸತಕ್ಕ—ಯಾ—6 ತಿಂಗಳ್ಗಳಿಗೆ ಮಿಗಿರಿದ ವಾಯಿದೆ ಸೈದಿನಿಂದ ಶಿಕ್ಷಿಸತಕ್ಕ ತಕ್ಕೀರಿಗೆ ಸಂಬಂಧಪಟ್ಟ ಮೊಕದ್ದಮೆಯೆಂತ ಅರ್ಥವಾಗುತ್ತದೆ.

"ವಾರಂಟ್ ಕೇಸು."

(t) "ಸಮನ್ಸು ಕೇಸು" ಅಂದರೆ ಸದರೀ ಮೇರಿಗೆ ಶಿಕ್ಷಿಸತಕ್ಕದ್ದಲ್ಲದ ತಕ್ಕೀರಿಗೆ ಸಂಬಂಧಪಟ್ಟ ಮೊಕದ್ದಮೆ ಎಂತ ಅರ್ಥವಾಗುತ್ತದೆ;

"ಸಮನ್ಸು ಕೇಸು:"

(u) "ಯೂರೋಪಿಯನ್ ಬ್ರಿಟಿಷ್ ಸಬ್‌ಜಿಕ್ಟ್" ಅಂದರೆ—

(1) ಗ್ರೇಟ್ ಬ್ರಿಟನ್—ಮತ್ತು—ಐರ್ಲಾಂಡ್ ಯೆಂಬ ಯುನೈಟೆಡ್ ಕಿಂಗಡಮಿನಲ್ಲಿ—ಯಾ—ಯೂರೋಪಿಯನ್ ಅಮೆರಿಕಾದೇಶದ—ಯಾ—ಆಸ್ಟ್ರೇಲಿಯಾದೇಶಗಳ —ಯಾ ಮಹಾರಾಣಿಯವರ ಸ್ವಾಧೀನ ದೇಶಗಳ ಯಾವ ಭಾಗದಲ್ಲಾದರೂ —ಯಾ—ನ್ಯೂಜೀಲ್ಯಾಂಡ್ ದೇಶದಲ್ಲಿ—ಯಾ—ಕೇಪ್ ಆಫ್ ಗುಡ್ ಹೊಪ್ ದೇಶದಲ್ಲಾದರೂ—ಯಾ—ನೆಟಾಲ್ ದೇಶದಲ್ಲಾದರೂ ಹುಟ್ಟಿದ, ಅಭ್ಯಸ್ತನಾದ ಅಥವಾ ಮನೆ ಬಾಗಿಲುಮಾಡಿಕೊಂಡಿರುವ, ಮಹಾರಾಣಿಯವರ ಪ್ರಜೆಯೆಂತಲೂ ;

"ಯೂರೋಪಿಯನ್ ಬ್ರಿಟಿಷ್ ಸಬ್‌ಜಕ್ಟ್."

(2) ಕಾನ್ಸ್ಟ್ರೀಯುವಾದ ಸಂತತಿಯಿಂದ ಹುಟ್ಟಿದ ಸದರೀ ಮನುಷ್ಯನ ಮಗ —ಯಾ— ಮೊಮ್ಮಗ ಯೆಂತ ಅರ್ಥವಾಗುತ್ತದೆ ;

(v) "ಚಾಪ್ಟರ್" ಅಂದರೆ, ಈ ಕೋಡಿನ ಒಂದು ಅಧ್ಯಾಯ ಮತ್ತು "ಷೆಡ್ಯೂಲ್" ಅಂದರೆ ಇದರಲ್ಲಿ ಶೇರಿಸಿರುವ, ಪಟ್ಟಿ, ಎಂತ ಅರ್ಥವಾಗುತ್ತದೆ.

"ಚಾಪ್ಟರ್:"
"ಷೆಡೂಲ್ :"

(w) "ಸ್ಥಳ" ಎಂಬ ಮಾತು ಮನೆ, ಕಟ್ಟಡ, ಗುಡಾರ, ಹಡಗು ಎಂಬುದನ್ನು ಅಡಗಿಸಿಕೊಂಡಿರುತ್ತದೆ.

"ಸ್ಥಳ :"

ಕೃತ್ಯಗಳನ್ನು ಸೂಚಿಸುವ ಮಾತುಗಳು.

ಮಾಡಲ್ಪಟ್ಟ ಕೃತ್ಯಗಳನ್ನು ಸೂಚಿಸುವ ಮಾತುಗಳು ಅಕ್ರಮವಾದ ಲೋಪಕ್ಕೂ ಕೂಡ ವ್ಯಾಪಿಸುತ್ತದೆ; ಮತ್ತು ಇಂಡಿಯನ್ ಪೆನಲ್‌ಕೋಡಿನಲ್ಲಿ ವಿವರಿಸಲ್ಪಟ್ಟು ಉಪಯೋಗಿಸಲ್ಪಟ್ಟು ಇದಕ್ಕೆ ಮೊದಲು ಇದರಲ್ಲಿ ವಿವರಿಸಲ್ಪಡದೇ ಇರುವ ಎಲ್ಲಾ ಮಾತುಗಳು—ವ—ಪದಗಳು ಆ ಕಾನೂನಿನಲ್ಲಿ ಅವುಗಳಿಗೆ ಕೊಡುವ ಅರ್ಥವೇ ಇಲ್ಲಿ ಕೊಡುತ್ತದೆಂಬುದಾಗಿ ಭಾವಿಸವಿಸಲ್ಪಡತಕ್ಕದ್ದು.

ಮಾತುಗಳಿಗೆ ಪಿನಲ್ ಕೋಡಿನಲ್ಲಿ ಇರುವ ಅರ್ಥವೇ ಇರತಕ್ಕದ್ದು.

5. ಇಂಡಿಯನ್ ಪೆನಲ್‌ಕೋಡಿಗೆ ಅನುಗುಣವಾದ ಎಲ್ಲಾ ತಕ್ಕೀರುಗಳು ಇದರಲ್ಲಿ ಮುಂದೆ ಕಾಣುವ ನಿಬಂಧನೆ ಪ್ರಕಾರ ವಿಚಾರಿಸಲ್ಪಡತಕ್ಕದ್ದು ಮತ್ತು ದರ್ಯಾಫ್ತಿ ಮಾಡಲ್ಪಡತಕ್ಕದ್ದು; ಮತ್ತು ಇತರ ಕಾನೂನಿಗೆ ಅನುಗುಣವಾದ ಎಲ್ಲಾ ತಕ್ಕೀರುಗಳು ಸದರೀ ನಿಬಂಧನೆಗಳ ಪ್ರಕಾರವೇ ವಿಚಾರಿಸಲ್ಪಡತಕ್ಕದ್ದು—ವ—ದರ್ಯಾಫ್ತಿ ಮಾಡಲ್ಪಡತಕ್ಕದ್ದು. ಆದರೆ ಸದರೀ ತಕ್ಕೀರುಗಳನ್ನು ವಿಚಾರಿಸುವ ಅಥವಾ ದರ್ಯಾಫ್ತಿ ಮಾಡುವಸ್ಥಳ—ಯಾ—ರೀತಿಯನ್ನು ಕ್ರಮಪಡಿಸಿ ಅಂತಾಯ ಕಾಲದಲ್ಲಿ ಜಾರೀಲಿ ಇರುವ ಜಟ್ಟಕ್ಕೆ ಒಳಪಟ್ಟಿರಬೇಕಾದ್ದು.

ಪಿನಲ್‌ಕೋಡಿನ ಅನುಗುಣವಾದ ತಕ್ಕೀರುಗಳ ದರ್ಯಾಫ್ತಿ. ಇತರ ಕಾನೂನುಗಳ ಅನುಗುಣವಾದ ತಕ್ಕೀರುಗಳ ದರ್ಯಾಫ್ತಿ.

PART II.

2ನೇ ಭಾಗ.

CONSTITUTION AND POWERS OF CRIMINAL COURTS AND OFFICES.

ಕ್ರಿಮಿನಲ್ ಕೋರ್ಟುಗಳ—ವ—ಉದ್ಯೋಗಗಳ ಏರ್ಪಾಟು ಮತ್ತು ಅಧಿಕಾರಗಳು.

CHAPTER II.—OF CONSTITUTION OF CRIMINAL COURTS AND OFFICES.

2ನೇ ಅಧ್ಯಾಯ.—ಕ್ರಿಮಿನಲ್ ಕೋರ್ಟುಗಳ—ವ—ಉದ್ಯೋಗಗಳ ಏರ್ಪಾಡನ್ನ ಕುರಿತು.

A.—Classes of Criminal Courts.

A.—ಕ್ರಿಮಿನಲ್ ಕೋರ್ಟುಗಳ ತರಗತಿಗಳು.

ಕ್ರಿಮಿನಲ್ ಕೋರ್ಟುಗಳ ತರಗತಿಗಳು.

6. ಚೀಫ್ ಕೋರ್ಟ್‌ಲ್ಲದೆ—ವ—ಆಯಾ ಕಾಲದಲ್ಲಿ ಜಾರೀಲಿರುವ ಈ ಕೋಡಲ್ಲದ ಇತರ ಯಾವ ಕಾನೂನನ್ನಾದರೂ ಅನುಸರಿಸಿ ಏರ್ಪಟ್ಟ ಕೋರ್ಟುಗಳಲ್ಲದೆ, ಮೈಸೂರು ಶೀಮೆಯಲ್ಲಿ ನಾಲ್ಕು ವಿಧವಾದ ಕ್ರಿಮಿನಲ್ ಕೋರ್ಟುಗಳು ಇರತಕ್ಕದ್ದು, ಯಾವವಂದರೆ :—

I.—ಸೆಷ್ಷನ್ ಕೋರ್ಟುಗಳು :

II.—ಫಸ್ಟ್ ಕ್ಲಾಸು ಮೇಜಸ್ಟ್ರೇಟುಗಳ ಕೋರ್ಟುಗಳು :

III.—ಸೆಕೆಂಡ್ ಕ್ಲಾಸ್ ಮೇಜಸ್ಟ್ರೇಟುಗಳ ಕೋರ್ಟುಗಳು :

IV.—ಥರ್ಡ್ ಕ್ಲಾಸ್ ಮೇಜಸ್ಟ್ರೇಟುಗಳ ಕೋರ್ಟುಗಳು :

B.—Territorial Divisions.

B.—ರಾಜ್ಯ ಸಂಬಂಧವಾದ ಡಿವಿಜ್ಞಗಳು.

ಸೆಷ್ಷನ್ ಡಿವೀಜ್ಞಗಳು. :

7. ಈ ಪ್ರಾವಿನ್ಸ್ ಬಂದು ಸೆಷ್ಷನ್ ಡಿವೀಜನಾಗಿರತಕ್ಕದ್ದು—ಯಾ—ಅದರಲ್ಲಿ ಸೆಷ್ಷನ್ ಡಿವೀಜ್ಞಗಳನ್ನು ಉಂಟಾಗಿರತಕ್ಕದ್ದು;

ಡಿಸ್ಟ್ರಿಕ್ಟುಗಳು.

ಮತ್ತು ಪ್ರತಿ ಸೆಷ್ಷನ್ ಡಿವಿಜನು ಈ ಕೋಡಿನ ಉದ್ದೇಶ್ಯಗಳಿಗಾಗಿ ಬಂದು ಡಿಸ್ಟ್ರಿಕ್ಟಾಗಿರತಕ್ಕದ್ದು—ಯಾ—ಅದರಲ್ಲಿ ಡಿಸ್ಟ್ರಿಕ್ಟುಗಳನ್ನು ಉಂಟಾಗಿರತಕ್ಕದ್ದು.

ಅಂಥಾ ಡಿವಿಜ್ಞಗಳ—ವ—ಡಿಸ್ಟ್ರಿಕ್ಟುಗಳ ಸರಹದ್ದುಗಳನ್ನು ಮೈಸೂರು ಗವರ್ನ್‌ಮೆಂಟಿನವರು ಬದಲಾಯಿಸಬಹುದು,—ಯಾ—ಅವುಗಳ ಸಂಖ್ಯೆಯನ್ನು ಬದಲಾಯಿಸಬಹುದು.

ಡಿವಿಜ್ಞಗಳನ್ನು—ವ—ಡಿಸ್ಟ್ರಿಕ್ಟುಗಳನ್ನು ಬದಲಾಯಿಸಲಿಕ್ಕೆ ಅಧಿಕಾರ.

ಈ ಕೋಡು ಜಾರೀಲಿ ಬರುವಾಗ್ಗೆ ಇರುತ್ತಿರುವ ಸೆಷನ್ ಡಿವೀಜ್ಞಗಳು—ವ—ಡಿಸ್ಟ್ರಿಕ್ಟುಗಳು ಹಾಗೆ ಬದಲಾಯಿಸಿದ ಹೊತ್ತು—ವ—ಬದಲಾಯಿಸುವ ವರಿಗೆ, ಅವು ಆಯಾಯ ಸೆಷನ್ ಡಿವಿಜ್ಞಗಳಾಗಿ—ವ—ಡಿಸ್ಟ್ರಿಕ್ಟುಗಳಾಗಿ ಇರತಕ್ಕದ್ದು.

ತಾತ್ಕಾಲಿಕ ಡಿವೀಜ್ಞಗಳು—ವ—ಡಿಸ್ಟ್ರಿಕ್ಟುಗಳು ಬದಲಾಯಿಸುವ ತನಕ ಹಾಗೆಯೇ ಇರತಕ್ಕದ್ದು.

8. ಮೈಸೂರು ಗವರ್ನ್‌ಮೆಂಟಿನವರು, ಯಾವ ಡಿಸ್ಟ್ರಿಕ್ಟನ್ನಾದರೂ ಸಬ್ ಡಿವಿಜ್ಞಗಳಾಗಿ ವಿಭಾಗಿಸಬಹುದು, ಅಥವಾ ಅಂಥಾ ಡಿಸ್ಟ್ರಿಕ್ಟಿನ ಯಾವ ಭಾಗವನ್ನಾದರೂ ಒಂದು ಸಬ್ ಡಿವಿಜ್ಞಆಗಿ ಮಾಡಬಹುದು, ಮತ್ತು ಯಾವ ಸಬ್ ಡಿವಿಜನಿನ ಸರಹದ್ದನ್ನಾಗಲೀ ಬದಲಾಯಿಸಬಹುದು.

ಡಿಸ್ಟ್ರಿಕ್ಟುಗಳನ್ನು ಸಬ್ ಡಿವಿಜ್ಞಗಳಾಗಿ ವಿಭಾಗಿಸಲಿಕ್ಕೆ ಅಧಿಕಾರ.

ಪ್ರಕೃತದಲ್ಲಿ ಇರುವ ಮತ್ತು ಈಗ ಸಾಧಾರಣವಾಗಿ ಮೇಜಸ್ಟ್ರೇಟಿನ ಜಿಮ್ಮೆಯಲ್ಲಿ ಇಡಲ್ಪಡುವ ಸಬ್ ಡಿವಿಜ್ಞಗಳೆಲ್ಲಾ ಈ ಕೋಡಿಗನುಗುಣವಾಗಿ ಮಾಡಲ್ಪಟ್ಟಂತೆ ಭಾವಿಸತಕ್ಕದ್ದು.

ಈಗ ಇರುವ ಸಬ್ ಡಿವಿಜ್ಞಗಳನ್ನು ಕಾಪಾಡತಕ್ಕದ್ದು.

C.—Courts and Offices.

C.—ಕೋರ್ಟುಗಳು—ವ—ಉದ್ಯೋಗಗಳು.

9. ಮೈಸೂರು ಗವರ್ನ್‌ಮೆಂಟಿನವರು ಪ್ರತಿ ಸೆಷನ್ಸ್ ಡಿವಿಜನಿಗೂ ಒಂದು ಸೆಷನ್ಸ್ ಕೋರ್ಟನ್ನು ಸ್ಥಾಪಿಸಿ, ಅದಕ್ಕೆ ಒಬ್ಬ ಜಡ್ಜಿಯನ್ನು ನೇಮಿಸತಕ್ಕದ್ದು.

ಸೆಷನ್ಸ್‌ಕೋರ್ಟು.

ಅಂಥಾ ಕೋರ್ಟುಗಳಲ್ಲಿಕಿ ಬಂದರಲ್ಲಿ—ಯಾ—ಹೆಚ್ಚು ಕೋರ್ಟುಗಳಲ್ಲಿ ಅಧಿಕಾರವನ್ನು ಚಲಾಯಿಸುವದಕ್ಕಾಗಿ ಅಡ್ಡಿಷನಲ್ ಸೆಷನ್ಸ್ ಜಡ್ಜಿಗಳನ್ನು, ಜಾಯಿಂಟ್ ಸೆಷನ್ಸ್ ಜಡ್ಜಿಗಳನ್ನು, ಅಸಿಸ್ಟೆಂಟ್ ಸೆಷನ್ಸ್ ಜಡ್ಜ್‌ಗಳನ್ನು ಕೂಡ ಅವರು ನೇಮಿಸಬಹುದು.

ಈ ಕೋಡು ಜಾರೀಗೆ ಬರುವಾಗ್ಗೆ ಇರುವ ಯೆಲ್ಲಾ ಸೆಷನ್ಸ್‌ಕೋರ್ಟುಗಳು ಈ ಆಕ್ಟಿಗನುಗುಣವಾಗಿ ಸ್ಥಾಪಿಸಲ್ಪಟ್ಟಿರುವಂತೆ ಯೆಣಿಸಲ್ಪಡತಕ್ಕದ್ದು.

10. ಪ್ರತಿ ಡಿಸ್ಟ್ರಿಕ್ಟಿನಲ್ಲಿ, ಮೈಸೂರು ಗವರ್ನ್‌ಮೆಂಟಿನವರು ಡಿಸ್ಟ್ರಿಕ್ಟು ಮೇಜಸ್ಟ್ರೇಟೆಂಬದಾಗಿ ಕರೆಯಲ್ಪಡತಕ್ಕ ಒಬ್ಬ ಫರ್ಸ್ಟ್‌ಕ್ಲಾಸ್ ಮೇಜಸ್ಟ್ರೇಟನ್ನ ನೊಕರರು ಮಾಡತಕ್ಕದ್ದು.

ಡಿಸ್ಟ್ರಿಕ್ಟು ಮೇಜಿಸ್ಟ್ರೇಟು.

11. ಒಂದು ಡಿಸ್ಟ್ರಿಕ್ಟುಮೇಜಸ್ಟ್ರೇಟಿನ ಉದ್ಯೋಗವು ಖಾಲಿಬಿದ್ದ ಪ್ರಯುಕ್ತ, ಸದರೀ ಡಿಸ್ಟ್ರಿಕ್ಟಿನ ಮುಖ್ಯವಾದ ಎಗ್ಜಿಕ್ಯೂಟಿವ್ ಅಡಳಿತಕ್ಕಾಗಿ ಯಾವನೊಬ್ಬ ಆಫಿಸರನಾಗಲೀ ಹಂಗಾಮಿಯಾಗಿ ಬರುವಾಗ್ಗೆಲ್ಲಾ, ಅಂಥಾ ಆಫಿಸರು ಮೈಸೂರು ಗವರ್ನ್‌ಮೆಂಟಿನ ಹುಕ್ಕುಮು ಬರುವತನಕ ಒಬ್ಬ ಡಿಸ್ಟ್ರಿಕ್ಟು ಮೇಜಸ್ಟ್ರೇಟಿಗೆ ಈ ಕೋಡಿನಿಂದ ವಿಧಿಸೋಣಾದ—ವ—ಕೊಡೋಣಾದ ಆಯಾಯ ಯೆಲ್ಲಾ ಅಧಿಕಾರಗಳನ್ನ ಚಲಾಯಿಸತಕ್ಕದ್ದು—ವ—ಕೆಲಸಗಳನ್ನ ನಡಿಸತಕ್ಕದ್ದು.

ಡಿಸ್ಟ್ರಿಕ್ಟು ಮೇಜಿಸ್ಟ್ರೇಟಿನ ಉದ್ಯೋಗವು ಖಾಲಿಯಾದಾಗ ಹಂಗಾಮಿಯಾಗಿ ಬರುವ ಆಫೀಸರುಗಳು.

12. ಯಾವ ಡಿಸ್ಟ್ರಿಕ್ಟಿನಲ್ಲಾಗಲೀ ಮೈಸೂರು ಗವರ್ನ್ಮೆಂಟಿನವರು ತಮಗೆ ಯುಕ್ತವೆಂದು ತೋರಿದ ಹಾಗೆ ಡಿಸ್ಟ್ರಿಕ್ಟ್ ಮೇಜಸ್ಟ್ರೇಟಲ್ಲದೆ ಬೇರೆ ಯಿಷ್ಟು ಮಂದಿಯನ್ನಾಗಲೀ ಫಸ್ಟ್—ಯಾ—ಸೆಕಂಡ್—ಯಾ—ತರ್ಡ್ ಕ್ಲಾಸು ಮೇಜಸ್ಟ್ರೇಟರಾಗಿ ಮೊಕರೂರುಮಾಡಬಹುದು; ಅಂಥಾ ಮನುಷ್ಯರು ಈ ಕೋಡಿಗನುಗುಣವಾಗಿ ಅವರವರಿಗೆ ಕೊಡೋಣಾದ ಅಧಿಕಾರಗಳಪೈಕಿ ತಮಾಮನ್ನಾಗಲೀ—ಯಾ—ಯಾವದನ್ನಾಗಲೀ, ಚಲಾಯಿಸಬಹುದಾದ ಸ್ಥಳಿಕ ಪ್ರದೇಶಗಳನ್ನ ಮೈಸೂರು ಗವರ್ನ್ಮೆಂಟಿನವರಾಗಲೀ, ಮೈಸೂರು ಗವರ್ನ್ಮೆಂಟಿನವರ ಅಧಿಕಾರಕ್ಕೆ ಬಳಪಟ್ಟು ಡಿಸ್ಟ್ರಿಕ್ಟ್ ಮೇಜಸ್ಟ್ರೇಟಾಗಲೀ, ಆಗಿಂದಾಗ್ಗೆ ನಿರ್ಣಯಿಸಬಹುದು.

ಸಬಾರ್ಡಿನೇಟು ಮೇಜಿಸ್ಟ್ರೇಟುಗಳು.

ಅವರ ಅಧಿಕಾರದ ಸ್ಥಳಿಕ ಸರಹದ್ದುಗಳು.

ಅಂಥಾ ನಿರ್ಣಯದಿಂದ ಅನ್ಯಥಾ ನಿಬಂಧನೆಯಾದರೇನೇ ಹೊರ್ತು, ಇತರ ಸಂಗತಿಯಲ್ಲಿ ಅಂಥಾ ಮನುಷ್ಯರ ಅಧಿಕಾರ ಸರಹದ್ದು—ವ—ಅಧಿಕಾರಗಳು ಅಂಥಾ ಡಿಸ್ಟ್ರಿಕ್ಟಿನ ಎಲ್ಲಾ ಭಾಗದಲ್ಲೂ ವ್ಯಾಪಿಸತಕ್ಕದ್ದು.

13. ಮೈಸೂರು ಗವರ್ನ್ಮೆಂಟಿನವರು, ಫಸ್ಟ್—ಯಾ—ಸೆಕಂಡು ಕ್ಲಾಸ್ ಯಾವ ಮೇಜಸ್ಟ್ರೇಟನ್ನಾದರೂ ಒಂದು ಸಬ್ ಡಿವಿಜನಿನ ಜಿಮ್ಮೆಯಲ್ಲಿ ಇರಿಸಬಹುದು, ಮತ್ತು ಅವಶ್ಯವಾದಾಗ ಅಂಥಾ ಜಿಮ್ಮೆಯಿಂದ ಆತನನ್ನ ಬಿಡಿಸಬಹುದು.

ಮೇಜಿಸ್ಟ್ರೇಟನ್ನ ಸಬ್ ಡಿವಿಜ಼ ಜಿಮ್ಮೆಯಲ್ಲಿರಿಸಲಿಕ್ಕೆ ಅಧಿಕಾರ.

ಸದರೀ ಮೇಜಸ್ಟ್ರೇಟರು ಸಬ್ ಡಿವಿಜನಲ್ ಮೇಜಸ್ಟ್ರೇಟರಾಗಿ ಕರೆಯಲ್ಪಡತಕ್ಕದ್ದು.

ಮೈಸೂರು ಗವರ್ನ್ಮೆಂಟಿನವರು ಈ ಪ್ರಕರಣಕ್ಕನುಗುಣವಾದ ತಮ್ಮ ಅಧಿಕಾರಗಳನ್ನು ಡಿಸ್ಟ್ರಿಕ್ಟ್ ಮೇಜಸ್ಟ್ರೇಟಿಗೆ ಒಪ್ಪಿಸಬಹುದು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟುಗಳಿಗೆ ಅಧಿಕಾರಗಳನ್ನ ಒಪ್ಪಿಸೋಣ.

14. ಮೈಸೂರು ಗವರ್ನ್ಮೆಂಟಿನವರು, ಫಲಾನಾ ಮೊಕದ್ದಮೆಗಳ ವಿಷಯವಾಗಿ, ಅಥವಾ ಫಲಾನಾ ತರಗತ್ತಿಯ—ಯಾ—ಫಲಾನಾ ತರಗತ್ತಿಗಳ ಮೊಕದ್ದಮೆಗಳ ವಿಷಯವಾಗಿ ಅಥವಾ ಸಾಧಾರಣವಾಗಿ ಮೊಕದ್ದಮೆಗಳ ವಿಷಯವಾಗಿ, ಫಸ್ಟ್ಸು, ಸೆಕೆಂಡು—ಯಾ—ತರ್ಡ್ ಕ್ಲಾಸು ಮೇಜಸ್ಟ್ರೇಟಿಗೆ ಈ ಕೋಡಿಗನುಗುಣವಾಗಿ ಕೊಡೋಣಾದ—ಯಾ—ಕೊಡೋಣಾಗಬಹುದಾವ ಯೆಲ್ಲಾ ಅಧಿಕಾರಗಳನ್ನಾಗಲೀ ಯಾವ ಅಧಿಕಾರಗಳನ್ನಾಗಲೀ ಯಾವ ಮನುಷ್ಯನಿಗಾದರೂ ಕೊಡಬಹುದು.

ಸ್ಪೆಷಲ್ ಮೇಜಿಸ್ಟ್ರೇಟರು.

ಅಂಥಾ ಮೇಜಸ್ಟ್ರೇಟರು ಸ್ಪೆಷಲ್ ಮೇಜಸ್ಟ್ರೇಟರು ಯೆಂಬವದಾಗಿ ಕರೆಯಲ್ಪಡತಕ್ಕದ್ದು.

ಮೈಸೂರು ಗವರ್ನ್ಮೆಂಟಿನವರು, ಈ ಪ್ರಕರಣವ ಮೊದಲನೇ ಕಲಮಿನಿಂದ ಕೊಡೋಣಾದ ಅಧಿಕಾರಗಳನ್ನ ಅವರಿಗೆ ನ್ಯಾಯಕರವಾಗಿ ತೋರುವಂಥಾ ಹದ್ದುನಿಶಿ ತಮ್ಮ ಮೇಲ್ವಿಚಾರದಲ್ಲಿರುವಂಥಾ ಯಾವ ಆಫಿಸರಿಗಾಗಲೀ ಒಪ್ಪಿಸಬಹುದು.

ಅಸಿಸ್ಟಂಟ್ ಕಮಿಷನರ್ ದರ್ಜೆಗಿಂತ ಕಮ್ಮಿ ದರ್ಜೆಯುಳ್ಳಿರುವ ಯಾವ ಪೋಲಿಸು ಆಫಿಸರನಿಗಾದರೂ ಈ ಪ್ರಕರಣಕ್ಕನುಗುಣವಾಗಿ ಯಾವ ಅಧಿಕಾರಗಳಾದರೂ ಕೊಡಲ್ಪಡಕೂಡದು, ಮತ್ತು ನೆಮ್ಮದಿಯ ಪರಿಪಾಲನಾರ್ಥದ ಬಗ್ಯೂ, ತಕ್ಕೀರನ್ನ ತಡೆಮಾಡುವ—ನ—ಕಂಡು ಹಿಡಿಯುವಬಗ್ಯೂ, ಮೇಜಸ್ಟ್ರೇಟರಮುಂದೆ ಹಾಜರುಮಾಡಿಸುವದಕ್ಕೋಸ್ಕರ ತಕ್ಕೀರುದಾರನನ್ನ ಹಿಡಿದು ತಡೆದಿಡುವಬಗ್ಯೂ, ಆಯಾಯಕಾಲದಲ್ಲಿ ಜಾರೀಲಿರುವ ಯಾವ ಕಾನೂನಿನಿಂದಾದರೂ ಸದರಿ ಆಫಿಸರಿಗೆ ವಿಧಿಸೋಣಾದ ಇತರ ಕೆಲಸಗಳನ್ನ ನೆರವೇರಿಸುವಬಗ್ಯೂ, ಆವಶ್ಯಕರವಾಗಿರುವಷ್ಟರಮಟ್ಟಿಗೆ ಶಿವಾಯಿ, ಹಾಗೆ ಯಾವ ಅಧಿಕಾರಗಳಾದರೂ ಕೊಡಲ್ಪಡಲಾಗದು.

15. ಯಾವ ಸ್ಥಳದಲ್ಲಾದರು ಇಬ್ಬರು—ಯಾ—ಹೆಚ್ಚು ಮಂದಿ ಮೇಜಸ್ಟ್ರೇಟರನ್ನ ಜೊತೆಯಾಗಿ ಒಂದು ಬೆಂಚಾಗಿ ಕೂಡಲಿಕ್ಕೆ ಮೈಸೂರು ಗವರ್ನ್ಮೆಂಟಿನವರು ಹುಕ್ಕುಂಮಾಡಬಹುದು, ಮತ್ತು ಅಂಥಾ ಬೆಂಚಿಗೆ ಫಸ್ಟ್—ಯಾ—ಸೆಕೆಂಡು—ಯಾ—

ಮೇಜಸ್ಟ್ರೇಟರ ಬೆಂಚುಗಳು.

1060

ತರ್ಡ್ ಕ್ಲಾಸು ಮೇಜಸ್ಟ್ರೇಟಿನಿಗೆ ಈ ಕೋಡಿಗನುಗುಣವಾಗಿ ಕೊಡೋಣಾಡ—ಯೆ—ಇದರಿಂದ ಕೊಡತಕ್ಕ ಅ, ಕಾರಗಳಲ್ಲಿಕಿ ಯಾವದನ್ನಾಗಲೀ ಹುಕ್ಕುಮಿನದ್ವಾರಾ ಕೊಡಬಹುದು, ಮತ್ತು ಫಲಾನೆ ಮೊಕದ್ದಮೆಗಳಲ್ಲಿ ಅಥವಾ ಮೊಕದ್ದಮೆಗಳ ಫಲಾನೆ ತರಗತಿಗಳಲ್ಲಿವಾತ್ರ ಮತ್ತು ಮೈಸೂರು ಗವರ್ನ್ಮೆಂಟಿನವರಿಗೆ ಯುಕ್ತವೆಂದು ತೋರುವ ಸ್ಥಳಿಕ ಸರಹದ್ದುಗಳೊಳಗೆ ಅಂಥಾ ಅಧಿಕಾರಗಳನ್ನ ಚಲಾಯಿಸತಕ್ಕದ್ದೆಂದು ಹುಕುಂ ಮಾಡಬಹುದು.

ವಿಶೇಷ ನಿರ್ದೇಶಗಳಿಲ್ಲದೆ ಇರುವಾಗ ಬೆಂಚಿನವರು ಚಲಾಯಿಸತಕ್ಕ ಅಧಿಕಾರಗಳು.

ಅಂಥಾ ಪ್ರತಿ ಬೆಂಚಿನವರು, ಈ ಪ್ರಕರಣಕ್ಕನುಗುಣವಾದ ಯಾವ ಹುಕ್ಕುಮಿನಿಂದಾದರೂ ಅನ್ಯಥಾ ನಿಬಂಧಿಸಿದ್ದರೇನೇ ಶಿವಾಯಿ ಇತರ ಸಂಗತಿಗಳಲ್ಲಿ ಸದರಿ ಬೆಂಚಿನಮೆಂಬರುಗಳಾಗಿ ಶೇರಿ ಹಾಜರಿದ್ದು ಪ್ರೊಸೀಡಿಂಗ್ಸು ನಡಿಸುವವರೊಳಗೆ ಯಾವ ಬಬ್ಬನಿಗಾದರೂ ಈ ಕೋಡಿನಿಂದ ಉಂಟಾಗಿರುವ ಮೇಜಸ್ಟ್ರೇಟಿನ ಹೆಚ್ಚಾದ ಕ್ಲಾಸಿನ ಅಧಿಕಾರಗಳನ್ನು ಉಳ್ಳವರಾಗಿರತಕ್ಕದ್ದು, ಮತ್ತು ಸಾಧ್ಯವಾಗುವಷ್ಟರಮಟ್ಟಿಗೆ ಈ ಕೋಡಿನ ಉದ್ದೇಶ್ಯಗಳಿಗಾಗಿ ಅಂಥಾ ಕ್ಲಾಸಿಗೆ ಶೇರಿದ ಒಬ್ಬ ಮೇಜಸ್ಟ್ರೇಟರಾಗಿ ಭಾವಿಸಲ್ಪಡತಕ್ಕದ್ದು.

ಬೆಂಚುಗಳ ನಡವಳಿತೇಬ್ಯೆ ಕಾಯಿದೆಗಳು ಮಾಡಲಿಕ್ಕೆ ಅಧಿಕಾರ

16. ಮೈಸೂರು ಗವರ್ನ್ಮೆಂಟಿನವರು ಅಥವಾ ಮೈಸೂರು ಗವರ್ನ್ಮೆಂಟಿನವರ ಮೇಲ್ವಿಚಾರಕ್ಕೆ ಒಳಪಟ್ಟ ಡಿಸ್ಟ್ರಿಕ್ಟ್ ಮೇಜಸ್ಟ್ರೇಟಿನವರು ಈ ಕಾನೂನಿಗೆ ಅನುಗುಣವಾಗಿ, ಈ ಕೆಳಗಣ ವಿಷಯಗಳನ್ನು ಕುರಿತು ಯಾವ ಡಿಸ್ಟ್ರಿಕ್ಟಿನಲ್ಲಾದರೂ ಇರುವ ಮೇಜಸ್ಟ್ರೇಟುಗಳ ಬೆಂಚುಗಳ ನಡವಳಿತದಬ್ಯೆ, ಕಾಯಿದೆಗಳನ್ನು ಆಗಿಂದಾಗ್ಯೆ ಮಾಡಬಹುದು :—

(a) ದರ್ಖಾಸ್ತು ಮಾಡಲ್ಪಡತಕ್ಕ ಮೊಕದ್ದಮೆಗಳ ವಿಧಗಳು ;
(b) ಕೂತುಕೊಳ್ಳತಕ್ಕ ಕಾಲಗಳು—ವ—ಸ್ಥಳಗಳು ;
(c) ದರ್ಖಾಸ್ತುಗಳನ್ನ ನಡಿಸುವದಕ್ಕೋಸ್ಕರ ಬೆಂಚಿನ ಏರ್ಪಾಡು :
(d) ಕೆಲಸದಲ್ಲಿ ಕೂತಿರುವಾಗ ಮೇಜಸ್ಟ್ರೇಟರೊಳಗೆ ಅಭಿಪ್ರಾಯ ಭೇದವಾದರೆ ಅವುಗಳನ್ನು ತೀರ್ಮಾನಿಸುವ ರೀತಿ.

ಡಿಸ್ಟ್ರಿಕ್ಟ್ ಮೇಜಸ್ಟ್ರೇಟಿಗೆ ಮೇಜಸ್ಟ್ರೇಟುಗಳೂ ಬೆಂಚುಗಳೂ ತಾಬೇದಾರಿಯಾಗಿರೋಣ.

17. 12, 13—ವ—14 ಈ ಪ್ರಕರಣಗಳಪ್ರಕಾರ ನೇಮಿಸಲ್ಪಟ್ಟ ಯೆಲ್ಲಾ ಮೇಜಸ್ಟ್ರೇಟುಗಳೂ, 15ನೇ ಪ್ರಕರಣ ಪ್ರಕಾರ ಏರ್ಪಾಟಾದ ಯೆಲ್ಲಾ ಬೆಂಚುಗಳೂ, ಡಿಸ್ಟ್ರಿಕ್ಟ್ ಮೇಜಸ್ಟ್ರೇಟಿಗೆ ತಾಬೇದಾರಿಯಾಗಿರತಕ್ಕದ್ದು, ಮತ್ತು ಅವರು ಈ ಕಾನೂನಿಗೆ ಅನುಗುಣವಾಗಿ ಆಗಿಂದಾಗ್ಯೆ ಸದರೀ ಮೇಜಸ್ಟ್ರೇಟುಗಳಿಗೆ ಮತ್ತು ಬೆಂಚುಗಳಿಗೆ ಕೆಲಸ ವಿಭಾಗಿಸಿಕೊಡುವ ವಿಷಯದಲ್ಲಿ, ಕಾಯಿದೆಗಳನ್ನು ಮಾಡಬಹುದು ; ಮತ್ತು

ಸಬ್ ಡಿವಿಜನಲ್ ಮೇಜಸ್ಟ್ರೇಟಿಗೆ ತಾಬೇದಾರಿಯಾಗಿರೋಣ.

ಬಂದು ಸಬ್ ಡಿವಿಜನಿನಲ್ಲಿ ಅಧಿಕಾರ ಚಲಾಯಿಸುವ (ಸಬ್ ಡಿವೀಜ್ಞ್ ಮೇಜಸ್ಟ್ರೇಟರೆಲ್ಲದ ಇತರ) ಪ್ರತಿ ಮೇಜಿಸ್ಟ್ರೇಟೂ, ಪ್ರತಿ ಬೆಂಚೂ, ಸಬ್ ಡಿವಿಜನಲ್ ಮೇಜಸ್ಟ್ರೇಟಿಗೆ ತಾಬೇದಾರಿಯಾಗಿ ಇರತಕ್ಕದ್ದು. ಆದಾಗ್ಯೂ ಡಿಸ್ಟ್ರಿಕ್ಟ್ ಮೇಜಸ್ಟ್ರೇಟಿನ ಸಾಧಾರಣ ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು.

ಅಸಿಸ್ಟಾಂಟ್ ಸೆಷ್ಷ ಜಡ್ಜಿಗಳು ಸೆಷ್ಷ ಜಡ್ಜಿಯವರಿಗೆ ತಾಬೇದಾರಿಯಾಗಿರೋಣ.

ಎಲ್ಲಾ ಅಸಿಸ್ಟಾಂಟ್ ಸೆಷ್ಷ ಜಡ್ಜಿಗಳು ಯಾವ ಕೋರ್ಟಿನಲ್ಲಿ ಅಧಿಕಾರ ಚಲಾಯಿಸುತ್ತಾರೋ ಆ ಸೆಷ್ಷ ಜಡ್ಜಿಗೆ ತಾಬೇದಾರಿಯಾಗಿರತಕ್ಕದ್ದು. ಮತ್ತು ಸದರೀ ಸೆಷ್ಷ ಜಡ್ಜಿಯವರು ಆಗಿಂದಾಗ್ಯೆ ಅಂಥಾ ಅಸಿಸ್ಟಾಂಟ್ ಸೆಷ್ಷ ಜಡ್ಜಿಗಳಿಗೆ ಕೆಲಸ ವಿಭಾಗಿಸಿಕೊಡುವಬ್ಯೆ ಈ ಕಾನೂನಿಗೆ ಅನುಗುಣವಾದ ಕಾಯಿದೆಗಳನ್ನು ಮಾಡಬಹುದು.

1061

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟಾಗಲೀ 12, 13, 14-ವ-15 ಈ ಪ್ರಕರಣಗಳ ಪ್ರಕಾರ ನೇಮಿಸಲ್ಪಟ್ಟ ಆಥವಾ ಏರ್ಪಟ್ಟ ಮೇಜಿಸ್ಟ್ರೇಟುಗಳಾಗಲೀ–ಯಾ–ಬೆಂಚುಗಳಾಗಲೀ ಸೆಷ್ಷನ್ಜಡ್ಜಿಯವರಿಗೆ, ಇನ್ನು ಮೇಲೆ ಸ್ಪಷ್ಟವಾಗಿ ನಿಬಂಧಿಸುವ ರೀತಿ–ವ–ಪರಿಮಾಣದ ಮಟ್ಟಿಗೆ ಅಲ್ಲದೆ, ತಾಬೇದಾರಿಯಾಗಿರತಕ್ಕದ್ದಿಲ್ಲಾ.

F.—Suspension and Removal.

F.—ಅಮಾನತ್ತು ಮತ್ತು ಕೆಲಸದಿಂದ ದೂರಪಡಿಸುವಿಕೆ.

ಜಡ್ಜಿಗಳನ್ನ ಮತ್ತು ಮೇಜಿಸ್ಟ್ರೇಟರನ್ನ ಅಮಾನತ್ತು ಮಾಡೋಣ ಮತ್ತು ಕೆಲಸದಿಂದ ದೂರಪಡಿಸೋಣ.

26. ಕ್ರಿಮಿನಲ್ ಕೋರ್ಟುಗಳ ಎಲ್ಲಾ ಜಡ್ಜಿಗಳು, ಮತ್ತು ಮೇಜಸ್ಟ್ರೇಟುಗಳು, ಮೈಸೂರು ಗವರ್ನಮೆಂಟಿನವರಿಂದ ಕೆಲಸದಿಂದ ಸಸ್ಪೆಂಡ್ ಮಾಡಲ್ಪಡಬಹುದು ಅಥವಾ ಕೆಲಸದಿಂದ ನಿವರ್ತಿಸಲ್ಪಡಬಹುದು.

Chapter III.

3ನೇ ಅಧ್ಯಾಯ.

Powers of Courts.

ಕೋರ್ಟುಗಳ ಅಧಿಕಾರಗಳು.

A.—Description of Offences cognizable by each Court.

A.—ಬಂದೊಂದು ಕೋರ್ಟಿನಿಂದ ದರ್ಯಾಫ್ತಿ ಯಾಗತಕ್ಕ ತಕ್ಕೀರುಗಳ ತಪ್ಸೀಲುಗಳು.

ಪಿನಲ್‌ಕೋಡಿನಪ್ರಕಾರ ತಕ್ಕೀರುಗಳು.

28. ಈ ಕೋಶದ ಇತರ ನಿಬಂಧನೆಗಳಿಗೆ ಒಳಪಟ್ಟು, ಇಂಡಿಯನ್ ಪಿನಲ್‌ಕೋಡಿನಪ್ರಕಾರ ಯಾವ ತಕ್ಕೀರಾದರೂ, ಸೆಷ್ಷನ್‌ಕೋರ್ಟಿನವರಿಂದಾಗಲಿ–ಯಾ–ಅಂಥಾ ತಕ್ಕೀರು ಎದಡನೇ ಷೆಡ್ಯೂಲಿನ 8ನೇ ಕಲಮಿನಲ್ಲಿ ದರ್ಯಾಫ್ತಿ ಮಾಡತಕ್ಕದ್ದಾಗಿ ತೋರಿಸಲ್ಪಟ್ಟಿರುವ ಇತರ ಯಾವ ಕೋರ್ಟಿನವರಿಂದಾಗಲೀ ದರ್ಯಾಫ್ತಿ ಮಾಡಲ್ಪಡಬಹುದು.

ಇತರ ಕಾನೂನುಗಳ ಪ್ರಕಾರ ತಕ್ಕೀರುಗಳು.

29. ಇತರ ಯಾವ ಕಾನೂನು ಪ್ರಕಾರ ಆಗುವ, ಯಾವ ತಕ್ಕೀರ್ ಆದರೂ ಅಂಥಾ ಕಾನೂನಿನಲ್ಲಿ ಈಬಗ್ಗಾಗಿ ಯಾವ ಕೋರ್ಟಾದರೂ, ನಮೂದಿಸಲ್ಪಟ್ಟಿದ್ದರೆ, ಅಂಥಾ ಕೋರ್ಟಿನವರಿಂದ ದರ್ಯಾಫ್ತಿ ಮಾಡಲ್ಪಡತಕ್ಕದ್ದು.

ಆ ಪ್ರಕಾರ ಯಾವ ಕೋರ್ಟುಯೆಂಬದು ನಮೂದಿಸಲ್ಪಡದೆ ಇದ್ದರೆ, ಅದು ಈ ಕೋಡಿನ ಪ್ರಕಾರ ಏರ್ಪಾಟಾದ ಯಾವ ಕೋರ್ಟಿನಿಂದಾದರೂ, ದರ್ಯಾಫ್ತಿ ಮಾಡಲ್ಪಡಬಹುದು : ಪರಂತು—

(a) ಏಳುವರುಷಕ್ಕೆ ಮೇಲ್ಪಟ್ಟ ವಾಯಿದೆಯ ಖೈದಿನಿಂದ ಶಿಕ್ಷಿಸಲ್ಪಡತಕ್ಕ ಅಂಥಾ ಯಾವ ತಕ್ಕೀರನ್ನೂ ಯಾವ ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರಾದರೂ ದರ್ಯಾಫ್ತಿ ಮಾಡಕೂಡದು;

(b) ಮೂರುವರುಷದ ವಾಯಿದೆವರಿಗಿನ ಖೈದಿನಿಂದ ಶಿಕ್ಷೆಯಾಗತಕ್ಕ ಅಂಥಾ ಯಾವ ತಕ್ಕೀರನ್ನೂ ಯಾವ ಸೆಕಂಡ್‌ಕ್ಲಾಸ್ ಮೇಜಸ್ಟ್ರೇಟಾದರೂ ದರ್ಯಾಫ್ತಿ ಮಾಡಕೂಡದು ; ಮತ್ತು

(c) ಒಂದು ವರುಷದ ವಾಯಿದೆವರಿಗಿನ ಖೈದಿನಿಂದ ಶಿಕ್ಷೆಯಾಗತಕ್ಕ ಅಂಥಾ ಯಾವ ತಕ್ಕೀರನ್ನೂ ಯಾವ ಥರ್ಡ್‌ಕ್ಲಾಸ್ ಮೇಜಸ್ಟ್ರೇಟಾದರೂ ದರ್ಯಾಫ್ತಿ ಮಾಡಕೂಡದು.

ಮರಣದಂಡನೆಯಿಂದ ಶಿಕ್ಷಿಸಲ್ಪಡದ ತಕ್ಕೀರುಗಳು.

30. 29ನೇ ಪ್ರಕರಣದಲ್ಲಿ ಏನು ನಮೂದಿಸಿದ್ದಾಗ್ಯೂ ಮೈಸೂರು ಸರ್ಕಾರದವರು, ಮರಣದಂಡನೆಗೆ ಒಳಪಡದ ವಿಶಿಷ್ಟ ತಕ್ಕೀರುಗಳನ್ನೂ ದರ್ಯಾಫ್ತಿ ಮಾಡುವಂತೆ ಒಬ್ಬ ಡಿಸ್ಟ್ರೀಕ್ಟ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರವನ್ನು ಕೊಡಬಹುದು.